ಶ್ರೀ ಎಂ. ವೀರಪ್ಪ ಮೊಯ್ಲಿ.—ಇದು ಬಹಳ ಉತ್ತಮವಾದ ಸಲಹೆ. ಈ ಸಲಹೆಯಂತೆ ಮಾಡ ಬೇಕಾದರೆ ಶ್ರೀ ಜೆ. ಎಚ್. ಪಟೇಲ್ ರವರನ್ನೇ ಅದರ ಛೇರ್ಮನ್ ಆಗಿ ಮಾಡಿ ಶ್ರೀ ಮೈಕಲ್ ಫರ್ನಾಂಡೀಸ್ ರವರನ್ನೇ ಸದಸ್ಯರನ್ನಾಗಿ ಮಾಡಿದರೆ ಆಗ ನಿಜವಾಗಿಯೂ ಒಂದು ಉತ್ತಮವಾದ ವರದಿ ಬರುತ್ತದೆ.

ಕುಮಾರಿ ಎಸ್. ಪ್ರಮೀಳಾ.—ಅಧಿಕಾರಿಯಲ್ಲಿ ಮಹಿಳೆಯೊಬ್ಬರನ್ನೂ ಹಾಕಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅದುದರಿಂದ ಅಧ್ಯಕ್ಷರೇ, ಈ ಶೇಂದಿ ಮತ್ತು ಸಾರಾಯಿ ಅಂಗಡಿಗಳನ್ನು ಕೆಲವು ಸ್ಥಳಗಳಲ್ಲಿ ಇಡಬಾರದು, ಅದಷ್ಟು ದೂರವಿರಬೇಕು ಎಂಬುದನ್ನು ಹಿಂದಿನ ಸರ್ಕಾರ ಕೂಡ ಹೇಳಿದೆ, ನಮ್ಮ ಸರ್ಕಾರದ ಅಭಿಪ್ರಾಯವು ಕೂಡ ಅದೇ ಆಗಿದೆ. ಇದನ್ನು ಅದಷ್ಟು ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತರುತ್ತೇವೆ. ಈ ದಿಶೆಯಲ್ಲಿ ಸರ್ಕಾರ ಖಂಡಿತವಾಗಿಯಾಗಿಯೂ ಕೆಲಸ ಮಾಡುತ್ತದೆ. ಅದಷ್ಟು ಜರೂರಾಗಿ ನಾವು ಇದರ ಬಗ್ಗೆ ಸಾಕಷ್ಟು ಕ್ರಮವನ್ನು ತೆಗೆದುಕೊಳ್ಳುತ್ತೇವೆ.

MR. SPEAKER.—The Hon. Minister of State for Fisheries and Ports may move the motion forPostponement of the discussion on the Governer's Address in favour of consideration of the Mangalore Port Trust (Repeal) Bill, 1980.

*Motion for Postponement of Discussion on the Motion of thanks for Governors Address*

SRI D. B. PAWAR.—I beg to move:

"That the discussion of the Governer's address be postponed in favour of consideration on the Mangalore Port Trust (Repeal) Bill, 1980."

MR. SPEAKER.—Motion moved The question is:

"That the discussion of the Governor's address be postponed in favour of consideration of the Mangalore Port Trust (Repeal) Bill, 1980."

*The Motion was adopted.*

## Legislative Business.

MR. SPEAKER.—I have received the recommendation from the Governor for consideration of the Mangalore Port Trust (Repeal) Bill. 1980. Therefore the Hon. Minister may please move the Bill.

SRI B. B. SAYANAK.—When there was a Business Advisory Committee, the Chief Minister has told us that they are not going to take up the Bill. When that is the position, why it is coming here.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಈ ಮಂಗಳೂರು ಪೋರ್ಟ್ ಬಿಲ್ ಬಹಳ ಸರಳವಾದ ಬಿಲ್. ಈ ಮಂಗಳೂರು ಪೋರ್ಟ್ ಬಿಲ್ಲನ್ನು ಹಿಂದಿನ ಸರ್ಕಾರದವರೇ ತಂದು ಆರ್ಡಿನೆನ್ಸ್ ಹೊರಡಿಸಿದ್ದರು. ಅಲ್ಲಿ ಏನೇನೂ ಕೆಲಸವಾಗಿಲ್ಲ. ಅಲ್ಲಿ ಏನೂ ಚಟುವಟಿಕೆಯೇ ಇಲ್ಲ. ಅದು ಹಳೆಯ ಪೋರ್ಟ್. ಅಲ್ಲಿ ಏನಾದರೂ ಚಟುವಟಿಕೆಯಿಂದ ಕೆಲಸ ಮಾಡಿದರೆ ಅದರಿಂದ ಸಾಕಷ್ಟು ಆದಾಯ ಸರ್ಕಾರಕ್ಕೆ ಬರುತ್ತದೆ. ಈ ದೃಷ್ಟಿಯಿಂದ ಈ ಬಿಲ್ಲನ್ನು ಅತಿ ಜರೂರಾಗಿ ಪಾಸ್ ಮಾಡಬೇಕಾಗಿರು